**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ**

**ದಿಃ 05.02.2026**

**ಪಾಟೀ ಸವಾಲುಃ ವಾದಿ ಪರ ಶ್ರೀ ಡಿ ಪಿ ಎಲ್ ವಕೀಲರಿಂದ**

ವಾದಿಗಳು ನನ್ನ ಮಕ್ಕಳು ಎಂದರೆ ಸರಿ . ಸುಮಾ ನನ್ನ ಹೆಂಡತಿ ಎಂದರೆ ಸರಿ. ಪ್ರತಿವಾದಿ 1 ನನ್ನ ತಂದೆ , ಪ್ರತಿವಾದಿ 2 ನನ್ನ ತಾಯಿ , ಪ್ರತಿವಾದಿ 4 ಮತ್ತು 5 ನನ್ನ ಸಹೋದರಿಯವರು ಎಂದರೆ ಸರಿ . ನಾನು ನನ್ನ ತಂದೆ ತಾಯಿ ಎಲ್ಲರು ಒಟ್ಟಿಗ ಇದ್ದೇವೆ ಎಂದರೆ ಸರಿಯಲ್ಲ. ಹಾಗೆ ದಾವಾಸ್ವತ್ತುಗಳನ್ನು ನಾವು ಒಟ್ಟಿಗೆ ಅನುಭವಿಸುತ್ತಿದ್ದೆವೆ ಎಂದರೆ ಸರಿಯಲ್ಲ. ನಾನು ಕೂಡುಮಂಗಳೂರಿನಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದೇನೆ. ಗೋವಿಂದ ಮಾಸ್ಟರ್ ಮನೆಯಲ್ಲಿ ಬಾಡಿಗೆಗೆ ಇದ್ದೆನೆ. ಬಾಡಿಗೆ ಕರಾರು ಮಾಡಿಸಿಕೊಂಡಿರುವುದಿಲ್ಲ. ನಾನು ಮತ್ತು ನನ್ನ ಸ್ನೇಹಿತ ಸುರೇಶ್ ಯಾದವ್ ರವರು ಒಟ್ಟಿಗೆ ಇರುವ ಕಾರಣ ಬಾಡಿಗೆ ಕರಾರು ಮಾಡಿಸಿಕೊಂಡಿರುವುದಿಲ್ಲ. ಬಾಡಿಗೆ ಮನೆಯ ಮನೆ ನಂಬರ ನನಗೆ ಗೊತ್ತಿಲ್ಲ. ನಾನು ಮತ್ತು ನನ್ನ ತಂದೆ ತಾಯಿ ಒಟ್ಟಿಗೆ ವಾಸವಿದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಮಾಣ ಪತ್ರದಲ್ಲಿ ತಿಳಿಸಿರುವ ವಿಳಾಸ ಸುಳ್ಳು ಎಂದರೆ ಸರಿಯಲ್ಲ. ನನ್ನ ತಂದೆಗೆ ಲಕ್ಕಿಕುಪ್ಪೆ ಗ್ರಾಮದಲ್ಲಿ ಪಿತ್ರಾರ್ಜಿತವಾಗಿ ಬಂದತಂತಹ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ.

2004 ರ ಇಸವಿಯವರೆಗೂ ನನ್ನ ತಂದೆ ಪಿತ್ರಾರ್ಜಿತವಾಗಿ ಬಂದಂತಹ ಆದಾಯವನ್ನು ಪಡೆದುಕೊಳ್ಳುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಈಗಲೂ ಸಹ ಪಿತ್ರಾರ್ಜಿತ ಆಸ್ತಿಯಿಂದ ಬಂದ ಆದಾಯವನ್ನು ಅನುಭವಿಸುತ್ತಿದ್ದೇವೆ ಎಂದರೆ ಗೊತ್ತಿಲ್ಲ.

ಲಕ್ಕಿಕುಪ್ಪೆ ಗ್ರಾಮದಲ್ಲಿ ಇದ್ದ ಜಮೀನನ್ನು ಮಾರಾಟ ಮಾಡಿ ಬಂದಂತಹ ಹಣದಿಂದ ನನ್ನ ತಂದೆ ಮತ್ತು ತಾಯಿ ಚಿಕ್ಕತ್ತೂರು ಕುಶಾಲನಗರದಲ್ಲಿ ಜಮಿನನ್ನು ಖರೀದಿ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ನನ್ನ ಚಿಕ್ಕಪ್ಪನಾದ ತಮ್ಮೆಗೌಡರವರಿಗೆ ನನ್ನ ತಾಯಿಯ ತಂಗಿಯನ್ನು ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ . ನನ್ನ ತಾಯಿಯ ಹೆಸರಿನಲ್ಲಿ ಖರೀದಿ ಮಾಡಿರುವ ಜಮೀನು ಸರ್ವೆ ನಂಬರ 7 ಆಗಿರಬಹುದು . ನಾನು ಖರೀದಿ ಮಾಡಿರುವ ಸರ್ವೆ ನಂ 48/2 ಎ ಮತ್ತು 2 ಬಿ ಇತ್ತು ಈಗ ಅದು ಸರ್ವೆ ನಂ 48/16 ಮತ್ತು 48/17 ಆಗಿರುತ್ತದೆ . ನಾನು ಮೊದಲು ಕಾಫಿ ಕ್ಯೂರಿಂಗ್ ವರ್ಕ್ಸನಲ್ಲಿ ಕೆಲಸ ಮಾಡುತ್ತಿದ್ದೆ. ಈಗ ವ್ಯವಸಾಯ ಮಾಡುತ್ತಿದ್ದೇನೆ. ನಾನು 1997-98 ರಲ್ಲಿ ಕಾಫಿ ಕ್ಯೂರಿಂಗ್ ವರ್ಕ್ಸ ನಲ್ಲಿ ಕೆಲಸ ಮಾಡಿರುತ್ತೇನೆ. ನಾನು ಖರೀದಿ ಮಾಡಿರುವ ಜಮೀನು ನಮ್ಮ ಮೂಲ ಪಿತ್ರಾರ್ಜಿತವಾಗಿ ಬಂದಂತಹ ಆದಾಯದಿಂದ ಖರೀದಿ ಮಾಡಿದ ಜಮೀನು ಎಂದರೆ ಸರಿಯಲ್ಲ.

ನಾನು ಕ್ರಯಕ್ಕೆ 2005 ರಲ್ಲಿ, 2007 ರಲ್ಲಿ ಮತ್ತು 2008 ರಲ್ಲಿ ತೆಗೆದುಕೊಂಡಿರುತ್ತೇನೆ. ಆಗ ನಾನು ವ್ಯವಸಾಯ ಮಾಡುತ್ತಿದ್ದೆ . ನಾನು 2005 ರಲ್ಲಿ ರೂ 1,04,000/- ರೂ ಕೊಟ್ಟು ಜಮೀನನ್ನು ಖರೀದಿ ಮಾಡಿರುತ್ತೇನೆ. 2007 ರಲ್ಲಿ ರೂ 50,000/- ಕೊಟ್ಟು ಜಮೀನನ್ನು ಖರೀದಿ ಮಾಡಿರುತ್ತೇನೆ. 2008 ರಲ್ಲಿ ರೂ 40,000/- ಕೊಟ್ಟು ಜಮೀನನ್ನು ಖರೀದಿ ಮಾಡಿರುತ್ತೇನೆ. ನಾನು 2020 ರಂದು ಸರ್ವೆ ನಂ 32/7, 32/20, 48/2ಎ ರಲ್ಲಿ ಇದ್ದ ಸ್ವತ್ತುಗಳನ್ನು ಮಾರಾಟ ಮಾಡಿರುತ್ತೇನೆ. 2020 ರಲ್ಲಿ ಸರ್ವೆ ನಂ 32/6, 48/2ಬಿ ಗೆ ಸಂಬಂದಪಟ್ಟ ಕ್ರಯದ

ಕರಾರು ಪತ್ರ ಸಹ ಮಾಡಿಕೊಟ್ಟಿರುತ್ತೇನೆ . ನಾನು ನನ್ನ ಸ್ವಂತ ತಂಗಿಯರಿಗೆ ಮಾರಾಟ ಮಾಡಿರುತ್ತೇನೆ ಮತ್ತು ಕ್ರಯದ ಕರಾರು ಅವರೊಂದಿಗೆ ಆಗಿರುತ್ತದೆ. ಮದುವೆಯಾಗಿನಿಂದಿಲೂ ಸ್ವಲ್ಪ ಮನಸ್ತಾಪ ನನ್ನ ಹೆಂಡತಿ ಜೊತೆ ಇತ್ತು . ನಂತರ 2019 ರಲ್ಲಿ ನನ್ನ ಹೆಂಡತಿ ಮನೆ ಬಿಟ್ಟು ಹೋಗಿರುತ್ತಾರೆ. ಮಕ್ಕಳು ಮೊದಲು ಸ್ವಲ್ಪ ವರುಷ ನನ್ನ ಜೊತೆ ಇದ್ದರು ನಂತರ ನನ್ನ ಹೆಂಡತಿಯ ಜೊತೆ ಇರುತ್ತಾರೆ . ಈಗ ಹಾಲಿ ನನ್ನ ಮಕ್ಕಳು ನನ್ನ ಹೆಂಡತಿಯ ಜೊತೆ ಇರುತ್ತಾರೆ.

2019 ರಲ್ಲಿ ನನ್ನ ಹೆಂಡತಿ ನನ್ನ ಜೊತೆಯಲ್ಲಿ ಇದ್ದರು ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 43/2020 ರಂತೆ ಇದೆ ನ್ಯಾಯಾಲಯದಲ್ಲಿ ಶಾಶ್ವತ ನಿರ್ಬಂದಕಾಜ್ಞೆ ಕೋರಿ ನನ್ನ ತಂದೆ ನನ್ನ ತಾಯಿ ನನ್ನ ಮತ್ತು ನನ್ನ ಹೆಂಡತಿಯ ವಿರುದ್ದ ಹಾಕಿದ್ದರು ಎಂದರೆ ಸರಿ . ಸದರಿ ದಾವೆಯನ್ನು ನಾನು ನನ್ನ ತಂದೆ ತಾಯಿಯ ಜೊತೇ ಶಾಮೀಲು ಹಾಕಿಸಿರುತ್ತೇನೆ ಎಂದರೆ ಸರಿಯಲ್ಲ. ನಾನೆ ನನ್ನ ಹೆಂಡತಿಯನ್ನು ಮನೆಯಿಂದ ಕಳುಹಿಸಬೇಕೆಂಬ ದುರುದ್ದೇಶ ಇಟ್ಟುಕೊಂಡು ನನ್ನ ತಾಯಿ ತಂದೆ ಕಡೆಯಿಂದ ಸದರಿ ದಾವೆಯನ್ನು ಹೂಡಿಸಿರುತ್ತೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಅದೇಶದ ಆದ ನಂತರ ನನ್ನ ಹೆಂಡತಿ ಮನೆಗೆ ಹೋಗಲು ಸಾಧ್ಯವಾಗಿಲಿಲ್ಲ ಆ ನಂತರ ನಾನು ಹೋಗಿ ನನ್ನ ತಂದೆ ತಾಯಿ ಜೊತೆ ವಾಸ ಮಾಡಲು ಶುರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನೆ ನನ್ನ ಹೆಂಡತಿಗೆ ಪ್ರತ್ಯೇಕವಾಗಿ ಬಾಡಿಗೆ ಮನೆ ಮಾಡಿ ಕೊಟ್ಟಿರುತ್ತೇನೆ ನನ್ನ ಹೆಂಡತಿ ಅಲ್ಲಿಂದಲೂ ನನ್ನನ್ನು ಬಿಟ್ಟು ಹೋಗಿರುತ್ತಾರೆ ಎಂದು

ನುಡಿದರು. ನಾನು ನನ್ನ ಹೆಂಡತಿಗೆ ಯಾವುದೆ ಬಾಡಿಗೆ ಮನೆಯನ್ನು ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

ಆ ನಂತರ ಸೋಮವಾರಪೇಟೆ ನ್ಯಾಯಾಲಯದಲ್ಲಿ ಎಂ ಸಿ ನಂ 18/2020 ರಂತೆ ವಿಚ್ಛೇದನಕ್ಕಾಗಿ ಸಲ್ಲಿಸಿರುತ್ತೇನೆ ಎಂದರೆ ಸರಿ . ಸದರಿ ಪ್ರಕರಣ ವಜಾಗೊಂಡಿರುತ್ತದೆ ಎಂದರೆ ಸರಿ. ಅದರ ಮೇಲೆ ಈಗ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿರುತ್ತೇನೆ ಎಂದರೆ ಸರಿ. ನಾನು ವಿವಾಹ ವಿಚ್ಛೇದನ ಪ್ರಕರಣ ದಾಖಲು ಮಾಡಿದ ನಂತರ ನನ್ನ ಹೆಂಡತಿ ಪಿರಿಯಾಪಟ್ಟಣ ನ್ಯಾಯಾಲಯದಲಲ್ಲಿ ಜೀವನಾಂಶ ಕೋರಿ ಪ್ರಕರಣ ಸಲ್ಲಿಸಿರುತ್ತಾರೆ ಎಂದರೆ ಸರಿ . ನಾನು, ನನ್ನ ತಂದೆ ತಾಯಿ ಎಲ್ಲಾರೂ ಸೇರಿಕೊಂಡು ವಾದಿಗಳಿಗೆ ಬಾಗಾಂಶ ಬರಬಾರದು ಎಂದು ಸುಳ್ಳು ಕ್ರಯ ಪತ್ರವನ್ನು ನನ್ನ ತಂಗಿಯಂದಿರ ಹೆಸರಿಗೆ ಸುಳ್ಳು ಕ್ರಯ ಪತ್ರವನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮಕ್ಕಳಿಗೆ ಬಾಗಾಂಶ ಕೊಡಬಕು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ವತ್ತುಗಳು ಒಟ್ಟು ಕುಟುಂಬದ ಪಿತ್ರಾರ್ಜಿತವಾದ ಬಂದತಂತಹ ಸ್ವತ್ತುಗಳು ಎಂದರೆ ಸರಿಯಲ್ಲ.

ನನ್ನ ಮದುವೆ ಕಾಲದಲ್ಲಿ ಕೊಟ್ಟ ವರದಕ್ಷಿಣೆ 200 ಗ್ರಾಂ ಚಿನ್ನ ಮತ್ತು ರೂ 3 ಲಕ್ಷ ನಗದಿನಲ್ಲಿ ಆಸ್ತಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ಹೆಂಡತಿ ಮದುವೆ ಸಮಯದಲ್ಲಿ ನನಗೆ ಯಾವುದೆ ವರದಕ್ಷಿಣೆ

ಕೊಟ್ಟಿರುವುದಿಲ್ಲ ನಾನೆ ಖರ್ಚು ಮಾಡಿ ಮದುವೆ ಮಾಡಿಕೊಂಡಿರುತ್ತೇನೆ ಎಂದು ನುಡಿದರು.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ.ದ ನ್ಯಾದಂ, ಕುಶಾಲನಗರ